

## ತಲೆಗೂದಲು ದಾನಿಗಳಿಗೆ ಟಿಪ್ಸ್

- ತಲೆಗೂದಲು ದಾನ ಮಾಡುವ ಮುನ್ನ ಸ್ವಚ್ಛ ಹಾಗೂ ಶುಷ್ಕವಾಗಿರಬೇಕು.
- ತಲೆಗೂದಲು ಕತ್ತರಿಸುವ ಮುನ್ನ ಅದನ್ನು ಪೋನಿಟೇಲ್‌ನಲ್ಲಿ ಇರಿಸಬೇಕು.
- ಜೆಲ್, ಹೇರ್‌ಸ್ಪ್ರೇ ರೀತಿಯ ಯಾವುದೇ ರಾಸಾಯನಿಕವನ್ನು ಕೂದಲಿಗೆ ಹಾಕಿಕೊಳ್ಳಬಾರದು.
- ದಾನಿಗಳು 8ರಿಂದ 14 ಇಂಚುಗಳವರೆಗೆ ತಲೆಗೂದಲನ್ನು ದಾನ ಮಾಡಬಹುದು.
- ಕ್ಯಾನ್ಸರ್ ಗುಣಮುಖ ಮಹಿಳೆಯರಿಗೆ ನೀಡಬೇಕಾಗಿರುವ ವಿಗ್‌ಗಾಗಿ ಹೇರ್ ಡೊನೇಶನ್ ಮಾಡಲು ಆಸಕ್ತಿ ಇರುವ ಮಹಿಳೆಯರು Bangalore hair donation ಕೇಂದ್ರವನ್ನು ಸಂಪರ್ಕಿಸಬಹುದು.

ಆ್ಯಂಟಿ ಬಯೊಟಿಕ್ಸ್‌ಗಳ ಅಡ್ಡಪರಿಣಾಮದಿಂದ ತಲೆಗೂದಲು ಉದುರಿ ಮಹಿಳೆ ಹೊರಗೆ ಹೋಗಲು ಹಿಂಜರಿಯಬೇಕಾದ ಪರಿಸ್ಥಿತಿ ಒದಗಿಬರುತ್ತದೆ. ಈ ಸಮಯದಲ್ಲಿ ಹೆಣ್ಣಿಗೆ ನೆಮ್ಮದಿ ಬೇಕು. ಸಮಾಧಾನದ ಅಗತ್ಯವೂ ಇದೆ. ರೋಗ ನಿವಾರಣೆಯಾದರೂ ಆತಂಕ ಮರೆಮಾಚುವುದೇ ಇಲ್ಲ. ಇಂಥವರಿಗೆ ಸಾಂತ್ವನ, ಸಮಾಧಾನ ನೀಡುವ 'ಸಪೋರ್ಟಿವ್ ಕೇರ್' ಇಂದಿನ ದಿನಗಳಲ್ಲಿ ಬಹಳ ಅಗತ್ಯ. ಆರ್ಥಿಕ ಹೊರೆಯನ್ನೂ ಅನುಭವಿಸಿರುವ ರೋಗಿಗಳಿಗೆ ಸೂಕ್ತ ರೀತಿಯ ಸಾಂತ್ವನ ಬೇಕು. ಜೊತೆಗೆ ಭಾವನಾತ್ಮಕ ಕಾಳಜಿಯೂ ಬೇಕಾಗುತ್ತದೆ.



ಮೀರಾ ನಾರಾಯಣ್ ಸಂಕೃತಿ

### ತಲೆಬೋಳಾದವರು ಸಂಕಟಪಡ್ತೀವಿ...

ಹನಿವೆಲ್ ಕಂಪನಿಯ ಲರ್ನಿಂಗ್ ಅಂಡ್ ಡೆವಲಪ್‌ಮೆಂಟ್ ವಿಭಾಗದಲ್ಲಿ ನಿರ್ದೇಶಕಿಯಾಗಿ ಕಾರ್ಯ ನಿರ್ವಹಿಸಿ ನಿವೃತ್ತಿ ಹೊಂದಿರುವ ಮೀರಾ ನಾರಾಯಣ ಸಂಕೃತಿ ಅವರ ಸಂಕಟ ಬೇರೆಯದೇ ತರಹದ್ದು. ಸ್ತನ ಕ್ಯಾನ್ಸರ್ ಬಂದು ಸರ್ಜರಿ ಮಾಡಿಸಿಕೊಂಡು ಗುಣಮುಖರಾದ ಇವರಿಗೆ ತಲೆಗೂದಲು ಉದುರಿದ ಸಮಸ್ಯೆಯಿಂದ ಆದ ಯಾತನೆ ವಿಪರೀತ. ಆ ಸಂಕಟದ ಅನುಭವವನ್ನು ಅವರ ಮಾತುಗಳಲ್ಲೇ ಕೇಳೋಣ:

''ಐದು ವರ್ಷಗಳ ಹಿಂದೆ ತಂಗಿಗೆ ಕ್ಯಾನ್ಸರ್ ಬಂದಿತ್ತು. ಅವಳೊಂದಿಗೆ ಬೆಂಗಳೂರಿನ ಸೈಟೆಕೇರ್ ಆಸ್ಪತ್ರೆಗೆ ಚಿಕಿತ್ಸೆಗಾಗಿ ನಾನೂ ಹೋಗಿದ್ದೆ. ಅಲ್ಲಿಯ ಕ್ಯಾನ್ಸರ್ ತಜ್ಞೆ, ಡಾ. ಪೂವಮ್ಮ ಅವರು ನನಗೂ ಒಮ್ಮೆ ಮ್ಯಾಮೊಗ್ರಾಮ್ ಮಾಡಿಸಿಕೊಳ್ಳುವಂತೆ ಹೇಳಿದ್ರು. ಹಾಗೆ ಮಾಡಿಸಿದಾಗ ನನ್ನ ಸ್ತನದಲ್ಲಿಯೂ ಕ್ಯಾನ್ಸರ್ ಗಡ್ಡೆ ಕಾಣಿಸಿಕೊಂಡಿತ್ತು. ಮೊದಲ ಸ್ಟೇಜ್‌ನಲ್ಲಿ ಇರುವುದರಿಂದ ಲಂಪ್ಸ್ ಮಾತ್ರ ಸರ್ಜರಿ ಮಾಡಿ ತೆಗೆಯುವುದಾಗಿ ಹೇಳಿದ್ರು. ಆದರೂ ನಾಲ್ಕು ಕಿಮೋಥೆರಪಿ ತೆಗೆದುಕೊಳ್ಳಬೇಕಾಯಿತು. ಅದರ ಅಡ್ಡಪರಿಣಾಮದ ಕಾರಣವಾಗಿ ನನ್ನ ತಲೆಗೂದಲು ಎಲ್ಲ ಉದುರಿಹೋಯ್ತು. ಬಹಳ ಸಂಕಟ ಆಯ್ತು. ಅಂಥ ಸಮಯದಲ್ಲಿ ನಮಗೆ ಮಾನಸಿಕವಾಗಿ ಬೆಂಬಲ ಕೊಡುವವರು ಬೇಕು. ನಾವು ಕೀಳರಿಮೆ, ಖಿನ್ನತೆ ಅನುಭವಿಸ್ತೀವಿ. ತಲೆಗೂದಲು ಇಲ್ಲದೇ ಬೋಳಾಗಿರುವ ತಲೆಯನ್ನು ಕಲ್ಪಿಸಿಕೊಳ್ಳಲೂ ಅಸಾಧ್ಯವಾಗಿರುವಾಗ ಕೂದಲೇ ಇಲ್ಲದಿದ್ದರೆ ಮನಸ್ಸಿಗಾಗುವ ನೋವು, ಯಾತನೆ ಅಷ್ಟಿಷ್ಟಲ್ಲ.''

ಅದೇ ಸಮಯದಲ್ಲಿ ಬೆಂಗಳೂರಿನ ಇನ್ನರ್‌ವೀಲ್ ಕ್ಲಬ್‌ನ ಗೆಳತಿ ವಿನುತಾ ಹರೀಶ್, ಅವರು 'ರಾಜಾಜಿನಗರದಲ್ಲಿ ಸಿನಿಮಾ ತಾರೆಯರಿಗಾಗಿಯೇ 'ಸಿನಿ ವಿಗ್ ವರ್ಕ್ಸ್' ಅಂತ ಇದೆ. ಅಲ್ಲಿ ವಿಗ್‌ಗಳು ಸಿಗುತ್ತೆ' ಅಂತ ಹೇಳಿದ್ರು. ಹಾಗೆ ಅಲ್ಲಿ ಹೋಗಿ ವಿಚಾರಿಸಿದೆ. ಅಲ್ಲಿ ಒಂದು ವಿಗ್‌ಗೆ 30ರಿಂದ 40 ಸಾವಿರ ರೂಪಾಯಿ ಬೆಲೆಯಿತ್ತು. ಆದರೆ ನನಗೆ ಹತ್ತು ಸಾವಿರ ರೂಪಾಯಿಗೆ ವಿಗ್ ಕೊಟ್ರು. ಆ ವಿಗ್ ಅನ್ನು ಬಳಸ್ತಾ ಇದ್ದೆ. ಅದನ್ನು ಬಳಸಿದಾಗ ತಲೆ ಇಡೀ ಬೆವರೋದು. ವಿಗ್ ಅನ್ನು ಶಾಂಪು ಹಾಕಿ ವಾಶ್ ಮಾಡುವ ಅನುಕೂಲವಿದ್ದರೂ, ಅದರ ಬಳಕೆ ಒಗ್ಗಲಿಲ್ಲ. ಹೀಗಾಗಿ ಕ್ಯಾಪ್ (ಕ್ಯಾನ್ಸರ್ ಕ್ಯಾಪ್ಸ್ ಫಾರ್ ವುಮೆನ್) ಅನ್ನು ಬಳಸಲಾರಂಭಿಸಿದೆ. ನನ್ನಂತೆ ಕ್ಯಾನ್ಸರ್ ಬಂದು ಗುಣಮುಖರಾದ ಮಹಿಳೆಯರಿಗೆ ಈ ಕ್ಯಾಪ್‌ಗಳನ್ನು ದೇಣಿಗೆಯಾಗಿಯೂ ನೀಡಿದ್ದೇನೆ.

ಕ್ಯಾನ್ಸರ್ ಗುಣವಾಗಿ ತಲೆಗೂದಲು ಕಳೆದುಕೊಂಡ ಮಹಿಳೆಯರ ಸಂಕಟ, ಮನದಾಳದ ನೋವು ನನಗೆ ಅರಿವಿದೆ. ಧೈರ್ಯ, ಆತ್ಮವಿಶ್ವಾಸವಿದ್ದರೂ ನಾನೇ ಒಂದೊಂದು ಸಲ ಬಹಳ ವೇದನೆ ಅನುಭವಿಸ್ತೇನೆ. ಗಣೇಶನ ಮೂರ್ತಿ ಮುಂದೆ ಕುಳಿತು. 'ನಂಗೇ ಯಾಕೆ ಹೀಗಾಯ್ತು' ಎಂದೆಲ್ಲ ಕೇಳಿಕೊಳ್ತಿದ್ದೆ. ನನಗೆ ಈಗ 72 ವರ್ಷ. ಮೂರು ಮಂದಿ ಹೆಣ್ಣುಮಕ್ಕಳು. ಎಲ್ಲರೂ ನನಗೆ ಬೆಂಬಲ ನೀಡ್ತಿದ್ದಾರೆ.




ಕೇಶದಾನದಲ್ಲಿ ಸುಖ ಕಂಡ 'ಸೀಡ್ಸ್ ಫಾರ್ ಹೋಪ್' ತಂಡ